ಸದನದಲ್ಲಿ ಉತ್ತರಿಸುವ
ಪ್ರಶ್ನೆಗಳ ಪಟ್ಟಿ
ಒಟ್ಟು ಪ್ರಶ್ನೆಗಳು - ೧೫

ಪಟ್ಟಿ-೦೫

# ಕರ್ನಾಟಕ ವಿಧಾನ ಪರಿಷತ್ತು

**ನೂರ ನಲವತ್ತನೆಯ ಅಧಿವೇಶನ**

**ಸೋಮವಾರ, ದಿನಾಂಕ: ೯ನೇ ಮಾರ್ಚ್, ೨೦೨೦**

---

**ಸಮೂಹ - I**

೧. ಉಪ ಮುಖ್ಯಮಂತ್ರಿಗಳು

೨. ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಮತ್ತು ಸಕಾಲ ಸಚಿವರು

೩. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು

೪. ವೈದ್ಯಕೀಯ ಶಿಕ್ಷಣ ಸಚಿವರು

೫. ಅರಣ್ಯ ಸಚಿವರು

೬. ಕಾರ್ಮಿಕ ಮತ್ತು ಸಕ್ಕರೆ ಸಚಿವರು

---

## ವಿದ್ಯಾರ್ಥಿಗಳ ಕೀಳರಿಮೆ ಕುರಿತು

ಡಾ. ಜೈಮಾಲ ರಾಮಚಂದ್ರ (ನಾಮನಿರ್ದೇಶನ ಹೊಂದಿದವರು) -

೬೧ (೫೮೯) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಮತ್ತು ಸಕಾಲ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ -

(ಅ) ಸರ್ಕಾರಿ ಶಾಲೆಗಳಲ್ಲಿ ಕಲಿಯುವ ವಿದ್ಯಾರ್ಥಿಗಳು ಕೀಳರಿಮೆ ಮತ್ತು ಹಿಂಜರಿಕೆಯಿಂದ ಬಳಲುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಈ ಕೀಳರಿಮೆಗೆ ಸರ್ಕಾರಿ ಶಾಲೆಗಳ ಕಟ್ಟಡ/ಬೋಧನಾ ಸೌಕರ್ಯ ಮತ್ತು ಶಾಲಾ ಪರಿಸರ ಕಾರಣವೇ : ಅಥವಾ ಪಠ್ಯಕ್ರಮ/ಬೋಧನಾ ವಿಧಾನ ಕಾರಣವೇ;

(ಇ) ವಿದ್ಯಾರ್ಥಿಗಳ ಹಾಗೂ ಪೋಷಕರ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗಳು ಕಾರಣವೇ ಎಂಬ ನಿಟ್ಟಿನಲ್ಲಿ ಅಧ್ಯಯನ ನಡೆಸಲಾಗಿದೆಯೇ : ನಡೆಸಿದ್ದಲ್ಲಿ, ಕಂಡುಕೊಂಡ ಕಾರಣಗಳು ಮತ್ತು ಪರಿಹಾರಗಳೇನು ?

## ಪದವಿ ಕಾಲೇಜುಗಳ ಸಹಾಯಕ ಪ್ರಾಧ್ಯಾಪಕರ ಬಗ್ಗೆ

ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ) –

೬೨ (೫೨೪) ಮಾನ್ಯ ಉಪ ಮುಖ್ಯಮಂತ್ರಿಗಳು ಮತ್ತು ಉನ್ನತ ಶಿಕ್ಷಣ ಹಾಗೂ ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಸರ್ಕಾರಿ ಪದವಿ ಕಾಲೇಜುಗಳಲ್ಲಿ ಖಾಲಿ ಇರುವ ಸಹಾಯಕ ಪ್ರಾಧ್ಯಾಪಕರ ಹುದ್ದೆಗಳ ಸಂಖ್ಯೆ ಎಷ್ಟು : (ವಿಷಯವಾರು ವಿವರ ನೀಡುವುದು)

(ಆ) ಸದರಿ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಚಿಂತಿಸಿದೆಯೇ ;

(ಇ) ಸದರಿ ಹುದ್ದೆಗಳ ನೇಮಕಾತಿಗೆ ಅನುಸರಿಸಲಾಗುತ್ತಿರುವ ಮಾನದಂಡಗಳೇನು;

(ಈ) ಅರ್ಹ ಅತಿಥಿ ಉಪನ್ಯಾಸಕರಿಗೆ ಸದರಿ ನೇಮಕಾತಿಯಲ್ಲಿ ವಯೋಮಿತಿ ಸಡಿಲಿಕೆ ಹಾಗೂ ಕೃಪಾಂಕ (ವೈಟೇಜ್) ನೀಡಲು ಸರ್ಕಾರ ಚಿಂತಿಸಿದೆಯೇ;

(ಉ) ಯಾವ ಕಾಲಮಿತಿಯಲ್ಲಿ ಸದರಿ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ವಹಿಸಲಾಗುವುದು ?

## ರಾಜ್ಯದಲ್ಲಿ ಅರಣ್ಯ ಒತ್ತುವರಿಯಾಗಿರುವ ಬಗ್ಗೆ

ಶ್ರೀ ಪಿ.ಆರ್. ರಮೇಶ್ (ನಾಮನಿರ್ದೇಶನ ಹೊಂದಿದವರು) –

೬೩ (೫೭೩) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯವು ಒಟ್ಟಾರೆ ಎಷ್ಟು ಹೆಕ್ಟೇರ್ ಅರಣ್ಯ ಪ್ರದೇಶವನ್ನು ಹೊಂದಿದೆ : (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಇದರಲ್ಲಿ ಎಷ್ಟು ಹೆಕ್ಟೇರ್ ಅರಣ್ಯ ಭೂಮಿಯನ್ನು ಒತ್ತುವರಿ ಮಾಡಿಕೊಳ್ಳಲಾಗಿದೆ; ಒತ್ತುವರಿ ತೆರವುಗೊಳಿಸಲು ಸರ್ಕಾರದಿಂದ ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ; (ಜಿಲ್ಲಾವಾರು ವಿವರ ನೀಡುವುದು)

(ಇ) ಅರಣ್ಯ ಪ್ರದೇಶದಲ್ಲಿ ಮನೆ ನಿರ್ಮಾಣ ಮಾಡಿಕೊಂಡು ವಾಸಿಸುವ ಎಷ್ಟು ಪ್ರಕರಣಗಳನ್ನು ಸಕ್ರಮಗೊಳಿಸಲಾಗಿದೆ : ಎಷ್ಟು ಬಾಕಿ ಇವೆ ? (ಜಿಲ್ಲಾವಾರು ಸಂಪೂರ್ಣ ಮಾಹಿತಿ ನೀಡುವುದು)



## ಶಾಲಾ ಮಕ್ಕಳಿಗೆ ಆಟದ ಮೈದಾನದ ಅಗತ್ಯತೆ ಬಗ್ಗೆ

ಶ್ರೀ ಆರ್. ಧರ್ಮಸೇನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –

೬೪ (೫೮೭) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಮತ್ತು ಸಕಾಲ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯದ ಎಲ್ಲಾ ಸರ್ಕಾರಿ ಹಾಗೂ ಅನುದಾನಿತ/ಅನುದಾನ ರಹಿತ ಶಾಲೆಗಳಲ್ಲಿ ಆಟದ ಮೈದಾನಗಳಿವೆಯೇ ; ಇದು ಅತ್ಯಾವಶ್ಯಕ ಎಂಬುದು ಸರ್ಕಾರದ ಗಮನದಲ್ಲಿದೆಯೇ ;

(ಆ) ಮಕ್ಕಳ ಮನೋವಿಕಾಸಕ್ಕೆ ಮತ್ತು ದೈಹಿಕ ಸಾಮರ್ಥ್ಯದ ಬೆಳವಣಿಗೆಗೆ ಆಟದ ಮೈದಾನಗಳ ಅಗತ್ಯತೆ ಇದೆ ಎಂಬ ಅರಿವು ಸರ್ಕಾರಕ್ಕಿದೆಯೇ ; ಇದ್ದಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳಾವುವು ?

## ಪ್ರಾಥಮಿಕ ಅನುದಾನಿತ ಶಿಕ್ಷಣ ಸಂಸ್ಥೆಗಳ ಕುರಿತು

**ಶ್ರೀ ಐವನ್ ಡಿ'ಸೋಜಾ (ನಾಮನಿರ್ದೇಶನ ಹೊಂದಿದವರು) –**

**೬೫ (೫೩೭)** ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಮತ್ತು ಸಕಾಲ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯದಲ್ಲಿರುವ ಪ್ರಾಥಮಿಕ ಅನುದಾನಿತ ಶಿಕ್ಷಣ ಸಂಸ್ಥೆಗಳು ಎಷ್ಟು ; ಶಿಕ್ಷಕರ ಸಂಖ್ಯೆ ಎಷ್ಟು ; (ಜಿಲ್ಲಾವಾರು ವಿವರ ನೀಡುವುದು)

(ಆ) ಅನುದಾನಿತ ಶಿಕ್ಷಕರಿಗೆ "ಜ್ಯೋತಿ ಸಂಜೀವಿನಿ" ಆರೋಗ್ಯ ಯೋಜನೆ ನೀಡದಿರಲು ಕಾರಣಗಳೇನು ; (ವಿವರ ನೀಡುವುದು)

(ಇ) ಸರ್ಕಾರಿ ಶಾಲೆಯ ಮಕ್ಕಳಿಗೆ ಪಠ್ಯ ಪುಸ್ತಕದ ಜೊತೆ ಶೂ ಮತ್ತು ಸಾಕ್ಸ್ ನೀಡಲಾಗುತ್ತಿದ್ದು, ಅನುದಾನಿತ ಶಾಲೆಗಳಿಗೆ ಶೂ ಮತ್ತು ಸಾಕ್ಸ್ ಯಾವ ಕಾರಣಕ್ಕೆ ನಿರಾಕರಿಸಲಾಗಿದೆ ; (ವಿವರ ನೀಡುವುದು)

(ಈ) ಅನುದಾನಿತ ಶಾಲೆಗಳಲ್ಲಿ ಶಿಕ್ಷಕರ ಮತ್ತು ಮಕ್ಕಳಿಗೆ ಸೌಲಭ್ಯಗಳಲ್ಲಿ ತಾರತಮ್ಯವನ್ನು ಸರಿದೂಗಿಸಲು ಇಲಾಖೆಯ ಮುಂದಿರುವ ಕ್ರಮಗಳೇನು ; (ವಿವರ ನೀಡುವುದು)

(ಉ) ಸರ್ಕಾರಿ ಶಾಲಾ ಮಕ್ಕಳಿಗೆ ಒದಗಿಸಿರುವ ಕರ್ನಾಟಕ ದರ್ಶನ ಪ್ರವಾಸವನ್ನು ಅನುದಾನಿತ ಮಕ್ಕಳಿಗೆ ನಿರಾಕರಿಸಲು ಕಾರಣಗಳೇನು ? (ವಿವರ ನೀಡುವುದು)

## ಬೀದರ್ ಜಿಲ್ಲೆಯಲ್ಲಿ ಬಾಲ ಕಾರ್ಮಿಕ ಪದ್ಧತಿ ಬಗ್ಗೆ

**ಶ್ರೀ ವಿಜಯ ಸಿಂಗ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೬೬ (೫೩೦) ಮಾನ್ಯ ಕಾರ್ಮಿಕ ಮತ್ತು ಸಕ್ಕರೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಬೀದರ್ ಜಿಲ್ಲೆಯಲ್ಲಿ ಬಾಲ ಕಾರ್ಮಿಕರು ಹೆಚ್ಚಾಗಿದ್ದು, ಇದನ್ನು ತಡೆಗಟ್ಟಲು ಸರ್ಕಾರ ಕೈಗೊಂಡ ಕ್ರಮಗಳೇನು :

(ಆ) ಬೀದರ್ ಜಿಲ್ಲೆಯಲ್ಲಿ ಕಲ್ಲು ಗಣಿಗಾರಿಕೆಯಲ್ಲಿ ಬಾಲ ಕಾರ್ಮಿಕರನ್ನು ದುಡಿಸಿಕೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ : ಬಂದಿದ್ದಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು ?

## ರಾಜ್ಯದಲ್ಲಿ ವಿವಿಧ ಸ್ಥಳೀಯ ಸಂಸ್ಥೆಗಳಿಂದ ನಡೆಸಲ್ಪಡುತ್ತಿರುವ ಪ್ರಾಥಮಿಕ ಪೂರ್ವ ಹಾಗೂ ಪ್ರಾಥಮಿಕ ಶಿಕ್ಷಣ ಹಾಗೂ ಶಿಕ್ಷಕರ ಬಗ್ಗೆ

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೬೭ (೫೪೯) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯದಲ್ಲಿ ಶಿಕ್ಷಣ ಇಲಾಖೆ ಮತ್ತು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗಳ ಜೊತೆಗೆ ಯಾವ ಯಾವ ಸ್ಥಳೀಯ ಸಂಸ್ಥೆಗಳು ಮಕ್ಕಳಿಗೆ ಪ್ರಾಥಮಿಕ ಪೂರ್ವ ಹಾಗೂ ಪ್ರಾಥಮಿಕ ಶಿಕ್ಷಣ ನೀಡುತ್ತಿವೆ ;

(ಆ) ರಾಜ್ಯದಲ್ಲಿ ಪುರಸಭೆ, ನಗರಸಭೆ ಮತ್ತು ಮಹಾನಗರ ಪಾಲಿಕೆಗಳಿಂದ ನಡೆಸಲ್ಪಡುತ್ತಿರುವ ಪ್ರಾಥಮಿಕ ಪೂರ್ವ ಶಿಕ್ಷಣ ಹಾಗೂ ಪ್ರಾಥಮಿಕ ಶಾಲೆಗಳ ಸಂಖ್ಯೆ ಎಷ್ಟು :

(ಇ) ಈ ಶಾಲೆಗಳಲ್ಲಿರುವ ಶಿಕ್ಷಕರ ಸಂಖ್ಯೆ ಎಷ್ಟು ; (ಲಿಂಗವಾರು ಮಾಹಿತಿ ನೀಡುವುದು)

(ಈ) ಈ ಶಾಲೆಗಳಲ್ಲಿ ಯಾವ ರೀತಿಯ ಪಠ್ಯ ಕ್ರಮಗಳನ್ನು ಅನುಸರಿಸಲಾಗುತ್ತಿದೆ;

(ಉ) ಈ ಶಾಲೆಗಳ ಶಿಕ್ಷಕರಿಗೆ ನೀಡುವ ತರಬೇತಿಯ ಕ್ರಮಗಳೇನು :

(ಊ) ಸದರಿ ಶಾಲೆಗಳ ಉಸ್ತುವಾರಿಗೆ ಸರ್ಕಾರ ಯಾವ ರೀತಿಯ ಕ್ರಮ ಕೈಗೊಂಡಿದೆ? (ಮಾಹಿತಿ ನೀಡುವುದು)



## ಕಾಡುಪ್ರಾಣಿಗಳ ದಾಳಿಯಿಂದ ಮೃತಪಟ್ಟ ವ್ಯಕ್ತಿಯ ಕುಟುಂಬಕ್ಕೆ ಹಾಗೂ ಜಾನುವಾರು ಕಳೆದುಕೊಂಡ ಕುಟುಂಬಕ್ಕೆ ಪರಿಹಾರ ಮೊತ್ತ ಹೆಚ್ಚಿಸುವ ಕುರಿತು

**ಶ್ರೀಮತಿ ಎಸ್. ವೀಣಾ ಅಚ್ಚಯ್ಯ (ವಿಧಾನಸಭೆಯಿಂದ ಚುನಾಯಿತರಾದವರು) –**

೬೮ (೫೭೧) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯದಲ್ಲಿ ಕಾಡುಪ್ರಾಣಿಗಳ ದಾಳಿಯಿಂದ ವ್ಯಕ್ತಿ ಮೃತಪಟ್ಟಾಗ ಆ ಕುಟುಂಬಕ್ಕೆ ಹಾಗೂ ಕಾಡುಪ್ರಾಣಿಗಳ ದಾಳಿಯಿಂದಾಗಿ ಜಾನುವಾರು ಕಳೆದುಕೊಂಡ ಕುಟುಂಬಗಳಿಗೆ ನೀಡುತ್ತಿರುವ ಪರಿಹಾರ ಮೊತ್ತವೆಷ್ಟು ; (ಅನುಸರಿಸುತ್ತಿರುವ ನಿಯಮಗಳು/ಮಾನದಂಡಗಳು ಹಾಗೂ ಇಡೀ ಪ್ರಕ್ರಿಯೆಯ ಸಂಪೂರ್ಣ ವಿವರ ನೀಡುವುದು)

(ಆ) ವ್ಯಕ್ತಿ ಹಾಗೂ ಜಾನುವಾರುಗಳನ್ನು ಕಳೆದುಕೊಂಡ ಸಂದರ್ಭದಲ್ಲಿ ಈಗ ನೀಡುತ್ತಿರುವ ಮೊತ್ತ ಅತ್ಯಂತ ಕಡಿಮೆ ಇದ್ದು, ಅದನ್ನು ಗಣನೀಯವಾಗಿ ಹೆಚ್ಚಿಸಬೇಕಾಗಿದ್ದು, ಈ ಕುರಿತು ಸರ್ಕಾರ ತುರ್ತಾಗಿ ಕ್ರಮವಹಿಸುವುದೇ ;

(ಇ) ಯಾವ ಕಾಲಮಿತಿಯೊಳಗೆ ಪರಿಹಾರ ಮೊತ್ತವನ್ನು ಹೆಚ್ಚಿಸಲಾಗುವುದು ?

## ಬೀದರ್ ಜಿಲ್ಲೆ ಐ.ಟಿ. ಪಾರ್ಕ್ ಪ್ರಾರಂಭಿಸುವ ಬಗ್ಗೆ

**ಶ್ರೀ ಅರವಿಂದ ಕುಮಾರ್ ಅರಳಿ (ವಿಧಾನಸಭೆಯಿಂದ ಚುನಾಯಿತರಾದವರು) –**

೬೯ (೫೧೬) ಮಾನ್ಯ ಉಪ ಮುಖ್ಯಮಂತ್ರಿಗಳು ಮತ್ತು ಉನ್ನತ ಶಿಕ್ಷಣ ಹಾಗೂ ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ೨೦೧೫–೧೬ನೇ ಸಾಲಿನಲ್ಲಿ ಬೀದರ್ ಜಿಲ್ಲೆಗೆ ಐ.ಟಿ. ಪಾರ್ಕ್ ಮತ್ತು Incubation center ಗಾಗಿ ಎಷ್ಟು ಅನುದಾನ ಬಜೆಟ್‌ನಲ್ಲಿ ಘೋಷಿಸಲಾಗಿತ್ತು ; ತಾಂತ್ರಿಕ ಕಾರಣಗಳಿಂದ ಈ ಯೋಜನೆಗೆ ಕೈತಪ್ಪಿರುವ ವಿಷಯ ಸರ್ಕಾರದ ಗಮನಕ್ಕಿದೆಯೇ; ಇದ್ದಲ್ಲಿ, ಈ ಯೋಜನೆ ಪ್ರಾರಂಭಿಸುವ ಯೋಚನೆ ಸರ್ಕಾರದ ಮುಂದಿದೆಯೇ;

(ಆ) ಹಾಗಿದ್ದಲ್ಲಿ, ಈ ಯೋಜನೆಯನ್ನು ಯಾವಾಗ ಪ್ರಾರಂಭಿಸಲಾಗುವುದು : ಇಲ್ಲದಿದ್ದಲ್ಲಿ ಕಾರಣವೇನು ?

## ಖಾಸಗಿ ಅನುದಾನಿತ ಶಿಕ್ಷಣ ಸಂಸ್ಥೆಗಳ ನೌಕರರಿಗೆ N.P.S. ಪಿಂಚಣಿ ಯೋಜನೆ ಜಾರಿ ಮಾಡುವ ಕುರಿತು

**ಶ್ರೀ ಎಸ್.ವ್ಹಿ. ಸಂಕನೂರ (ಪದವೀಧರರ ಕ್ಷೇತ್ರ) –**

೭೦ (೫೬೯) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಮತ್ತು ಸಕಾಲ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯದ ಅನುದಾನಿತ ಪ್ರಾಥಮಿಕ ಮತ್ತು ಪ್ರೌಢ ಹಾಗೂ ಪದವಿ ಪೂರ್ವ ಕಾಲೇಜುಗಳಲ್ಲಿ ೨೦೦೬ರ ನಂತರ ನೇಮಕಗೊಂಡ ಸಿಬ್ಬಂದಿಗೆ N.P.S. ಪಿಂಚಣಿ ಯೋಜನೆ ಜಾರಿ ಮಾಡುವ ಕುರಿತು ಸರ್ಕಾರ ಚಿಂತನೆ ನಡೆಸಿದೆಯೇ :

(ಆ) ಈ ಸಿಬ್ಬಂದಿಗೆ N.P.S. ಜಾರಿ ಮಾಡಿದಲ್ಲಿ ಸರ್ಕಾರದ ಮೇಲೆ ಎಷ್ಟು ಆರ್ಥಿಕ ಹೊರೆ ಬೀಳಲಿದೆ ಎಂಬ ಬಗ್ಗೆ ಮಾಹಿತಿಯನ್ನು ಸಂಗ್ರಹ ಮಾಡಲಾಗಿದೆಯೇ ? (ವಿವರವಾದ ಮಾಹಿತಿ ನೀಡುವುದು)

## ರಾಜ್ಯದಲ್ಲಿ ಇರುವ ಒಟ್ಟು ಸರ್ಕಾರಿ ಆಸ್ಪತ್ರೆ ಮತ್ತು ಸಿಬ್ಬಂದಿಗಳ ಸಂಖ್ಯೆಗಳನ್ನು ಕುರಿತು

**ಶ್ರೀ ಹೆಚ್.ಎಂ. ರಮೇಶಗೌಡ (ವಿಧಾನಸಭೆಯಿಂದ ಚುನಾಯಿತರಾದವರು) –**

೭೧ (೫೪೦) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಕರ್ನಾಟಕ ರಾಜ್ಯದಲ್ಲಿರುವ ಒಟ್ಟು ಸರ್ಕಾರಿ ಆಸ್ಪತ್ರೆಗಳೆಷ್ಟು ; ಹಾಗೂ ಸಿಬ್ಬಂದಿ ವರ್ಗದವರ ಒಟ್ಟು ಅಂದಾಜು ಎಷ್ಟು ;

(ಆ) ರಾಜ್ಯದಲ್ಲಿರುವ ಸರ್ಕಾರಿ ಆಸ್ಪತ್ರೆಗಳಲ್ಲಿ ಮೂಲ ಸೌಲಭ್ಯಗಳು ಲಭ್ಯವಿದೆಯೇ; ಹಾಗಿದ್ದಲ್ಲಿ, ಜನರು ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯಲು ಕಾರಣವೇನು; (ಮಾಹಿತಿ ನೀಡುವುದು)

(ಇ) ಸರ್ಕಾರಿ ಆಸ್ಪತ್ರೆಗಳಲ್ಲಿ ಸಮಯಕ್ಕೆ ಸರಿಯಾಗಿ ಸಿಬ್ಬಂದಿಗಳು ಸಿಗುವುದಿಲ್ಲ ಎಂಬ ದೂರುಗಳಿಗೆ ಸರ್ಕಾರ ಕೈಗೊಂಡ ಶಿಸ್ತು ಕ್ರಮಗಳೇನು ;

(ಈ) ಅನೇಕ ಆಸ್ಪತ್ರೆಗಳಲ್ಲಿ ಲಸಿಕೆಗಳನ್ನು ತಪ್ಪಾಗಿ ನೀಡುವುದರಿಂದ ಜನರು ಮರಣ ಹೊಂದುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಹಾಗಿದ್ದಲ್ಲಿ, ಬೇಜವಾಬ್ದಾರಿಯಾಗಿ ನಡೆದುಕೊಳ್ಳದಂತೆ ಸರ್ಕಾರದಿಂದ ಯಾವ ರೀತಿಯ ಸೂಚನೆಗಳನ್ನು ಆಸ್ಪತ್ರೆಯ ಸಿಬ್ಬಂದಿಗಳಿಗೆ ನೀಡಲಾಗಿದೆ ;



(ಉ) ಜಿಲ್ಲಾ ಆರೋಗ್ಯಾಧಿಕಾರಿಗಳು ಪ್ರತಿ ವಾರಕ್ಕೊಮ್ಮೆ ಒಂದು ಅಥವಾ ಎರಡು ದಿನ ತಮ್ಮ ಜಿಲ್ಲಾ ವ್ಯಾಪ್ತಿಯ ಆಸ್ಪತ್ರೆಗಳಲ್ಲಿ ಕುಂದು ಕೊರತೆಗಳಿಗೆ ಮೀಸಲಿರಿಸುತ್ತಿದ್ದಾರೆಯೇ ; ಹಾಗಿದ್ದಲ್ಲಿ, ಸರ್ಕಾರಿ ಆಸ್ಪತ್ರೆಗಳ ಬಗ್ಗೆ ಜನರ ಅಸಡ್ಡೆ ಯಾಕೆ ; ಸರ್ಕಾರಿ ಆಸ್ಪತ್ರೆಗಳಿಗೆ ಮೂಲ ಸೌಕರ್ಯಗಳ ಜೊತೆಗೆ, ಮುಂದುವರೆದ ಚಿಕಿತ್ಸೆಯನ್ನು ನೀಡುವ ಯೋಜನೆಗಳನ್ನು ತರಲು ಸರ್ಕಾರಕ್ಕೆ ಇರುವ ಸಮಸ್ಯೆ ಏನು ?

## ಉತ್ತರ ಕರ್ನಾಟಕ ಮತ್ತು ಹೈದ್ರಾಬಾದ್ ಕರ್ನಾಟಕ ಭಾಗದಿಂದ ನಿಯಮ ಬಾಹಿರವಾಗಿ ಮಾಡಲಾಗಿರುವ ಕಾಲೇಜು ಶಿಕ್ಷಣ ಇಲಾಖೆಯ ಉಪನ್ಯಾಸಕರ ನಿಯೋಜನೆ ಬಗ್ಗೆ

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ) –**

೭೨ (೫೫೮) ಮಾನ್ಯ ಉಪ ಮುಖ್ಯಮಂತ್ರಿಗಳು ಮತ್ತು ಉನ್ನತ ಶಿಕ್ಷಣ ಹಾಗೂ ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ದಿನಾಂಕ: ೧೯–೧–೨೦೧೯ರ ಪತ್ರ ಸಂಖ್ಯೆ:ಕಾಶಿಇ:೩೫೩ ಯೋಜನೆ ೨೦೧೮–೧೯ರಲ್ಲಿ ಸಹ/ಸಹಾಯಕ ಪ್ರಾಧ್ಯಾಪಕರು/ಬೋದಕೇತರರನ್ನು ಆಡಳಿತಾತ್ಮಕ ಹಿತದೃಷ್ಟಿಯಿಂದ ನಿಯೋಜನೆ ಮಾಡಿರುವುದು ನಿಜವೇ ; ಮಾಡಿದ್ದಲ್ಲಿ, ಎಷ್ಟು ಜನರನ್ನು ಮಾಡಲಾಗಿದೆ ; ಅದಕ್ಕೆ ಕಾರಣಗಳೇನು ;

(ಆ) ಸದರಿಯವರುಗಳ ನೇಮಕಾತಿ ದಿನಾಂಕ ಹಾಗೂ ಹುದ್ದೆ ಯಾವುದು ; ಅವರನ್ನು ಎಲ್ಲಿಂದ ಎಲ್ಲಿಗೆ ವರ್ಗಾವಣೆ ಮಾಡಲಾಗಿದೆ ; ಅವರ ಹೆಸರು ಮತ್ತು ಹುದ್ದೆಗಳೇನು ;

(ಇ) ಈ ನಿಯೋಜನೆ ಮಾಡಿದ್ದರಿಂದ ಉತ್ತರ ಕರ್ನಾಟಕದ ಮಕ್ಕಳಿಗೆ ಶಿಕ್ಷಕರಿಲ್ಲದೆ ಅವರು ಶಿಕ್ಷಣದಿಂದ ವಂಚಿತರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಈ) ಉತ್ತರ ಕರ್ನಾಟಕದಲ್ಲಿ ನೇಮಕಾತಿಯಾಗಿ ಮೈಸೂರು ಬೆಂಗಳೂರಿಗೆ ನಿಯೋಜನೆ ಮಾಡುವುದು ಅನ್ಯಾಯವಲ್ಲವೆ ; ೧೦೦ಕ್ಕೆ ೯೦ರಷ್ಟು ಮೈಸೂರು ಬೆಂಗಳೂರಿಗೆ ನಿಯೋಜನೆ ಮಾಡಿ ಉತ್ತರ ಕರ್ನಾಟಕದ ಮಕ್ಕಳಿಗೆ ಆಗುತ್ತಿರುವ ಈ ತಾರತಮ್ಯವನ್ನು ಹೋಗಲಾಡಿಸಲು ಸಾಧ್ಯವೆ ; ಇದರಲ್ಲಿ ಸಾಕಷ್ಟು ಭ್ರಷ್ಟಾಚಾರ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

## ಭಾಷಾ ಅಲ್ಪಸಂಖ್ಯಾತ ಶಾಲೆಗಳ ರೋಸ್ಟರ್ ವಿನಾಯಿತಿ ಬಗ್ಗೆ

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ) –**

೭೩ (೫೩೩) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಮತ್ತು ಸಕಾಲ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಭಾಷಾ ಅಲ್ಪಸಂಖ್ಯಾತ ಅನುದಾನಿತ ಶಾಲಾ ಕಾಲೇಜುಗಳಲ್ಲಿ ಖಾಲಿ ಇರುವ ಬೋಧಕ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಇರುವ ನಿಯಮಾವಳಿಗಳೇನು; ರೋಸ್ಟರ್ ಅನ್ವಯವಾಗುತ್ತದೆಯೇ ;

(ಆ) ಪ್ರಸ್ತುತ ಭಾಷಾ ಅಲ್ಪಸಂಖ್ಯಾತ ಶಾಲಾ ಕಾಲೇಜುಗಳಲ್ಲಿ ಎಷ್ಟು ಹುದ್ದೆಗಳು ಖಾಲಿ ಇವೆ ; (ವಿಜಯಪುರ/ಬಾಗಲಕೋಟೆ ಮತ್ತು ಬೆಳಗಾವಿ ಜಿಲ್ಲೆಗಳ ಮಾಹಿತಿ ನೀಡುವುದು)

(ಇ) ಈ ರೋಸ್ಟರ್ ನಿಯಮಾವಳಿಗಳ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಸಾಧ್ಯವಾಗದೇ ರೋಸ್ಟರ್ ನಿಯಮಾವಳಿಗಳಲ್ಲಿ ವಿನಾಯಿತಿಯನ್ನು ನೀಡುವಂತೆ ಬೇಡಿಕೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಯಾವ ಯಾವ ವಿನಾಯಿತಿಗಳನ್ನು ನೀಡಲು ಸರ್ಕಾರ ಮುಂದಾಗಿದೆ ; (ವಿವರವನ್ನು ಒದಗಿಸುವುದು)

(ಈ) ಈ ಪ್ರಾಥಮಿಕ ಪ್ರೌಢ ಶಾಲೆಗಳಲ್ಲಿ ಶಿಕ್ಷಕ/ಮಕ್ಕಳ ಅನುಪಾತ ಎಷ್ಟು ; ಈ ನಿಯಮಾವಳಿಗಳಿಂದ ಈ ಶಿಕ್ಷಣ ಸಂಸ್ಥೆಗಳಿಗೆ ಅನ್ಯಾಯವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಭಾಷಿಕ/ಧಾರ್ಮಿಕ ಅಲ್ಪಸಂಖ್ಯಾತ ಶಾಲೆಗಳಲ್ಲಿ ತಾರತಮ್ಯವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರಿಪಡಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ?



## ಗೊಲ್ಲ ಜನಾಂಗದ ಅಭಿವೃದ್ಧಿ ನಿಗಮ ಸ್ಥಾಪನೆ

**ಶ್ರೀಮತಿ ಜಯಮ್ಮ (ವಿಧಾನಸಭೆಯಿಂದ ಚುನಾಯಿತರಾದವರು) –**

೭೪ (೬೮೮) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಗೊಲ್ಲ ಜನಾಂಗದ ಅಭಿವೃದ್ಧಿ ನಿಗಮ ಸ್ಥಾಪಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ ;

(ಆ) ಇದ್ದಲ್ಲಿ, ಯಾವಾಗ ಸ್ಥಾಪಿಸಲಾಗುವುದು ;

(ಇ) ಬಜೆಟ್‌ನಲ್ಲಿ ಘೋಷಣೆ ಮಾಡುವ ಉದ್ದೇಶ ಸರ್ಕಾರಕ್ಕಿದೆಯೇ ;

(ಈ) ಕರ್ನಾಟಕ ರಾಜ್ಯದಲ್ಲಿ ಇರುವ ಗೊಲ್ಲ ಜನಾಂಗದ ಜನಸಂಖ್ಯೆ ಎಷ್ಟು ? (ಜಿಲ್ಲಾವಾರು ವಿವರ ನೀಡುವುದು)

**ಕೆ.ಆರ್. ಮಹಾಲಕ್ಷ್ಮಿ**
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

ಸರ್ಕಾರಿ ಮುದ್ರಣಾಲಯ, ವಿಕಾಸಸೌಧ, ಬೆಂಗಳೂರು. ಪಿ7, ಕಾಸೂ. 969, ಪ್ರತಿಗಳು 400

List of Questions
for Oral Answers

Total No. of
Questions - 15

# LIST - 05

# KARNATAKA LEGISLATIVE COUNCIL

## ONE HUNDRED AND FORTIETH SESSION

## Monday, the 9th March, 2020

---

### GROUP - I

1. Deputy Chief Minister
2. Minister for Primary and Secondary Education and Sakala
3. Minister for Health and Family Welfare and Backward Classes Welfare
4. Minister for Medical Education
5. Minister for Forest
6. Minister for Labour and Sugar

---

### *INFERIORITY COMPLEX IN STUDENTS*

***Dr. Jaimala Ramachandra (Nominated)*** -

61 (589) Will the Minister for Primary and Secondary Education and Sakala be pleased to state:-

a) whether it has come to the notice of the Government that students who are studying in the Government schools are suffering from inferiority complex and hesitation;

b) whether building of the schools/teaching facilities and school environment or curriculum/teaching methods are the reason for the same;

c) whether the study has been conducted the social and economic conditions of students and parents are the causes for such inferiority complex; if so, the details of reasons that have been found for the same?

## ASSISTANT PROFESSORS OF DEGREE COLLEGES

***Sri Marithibbe Gowda (Teachers' Constituency) -***

62 (524) Will the Deputy Chief Minister and Minister for Higher Education, Information Technology and Bio-Technology, Science and Technology, Skill development, Enterpreneurship and Livelihood be pleased to state:-

a) the number of vacant posts of Assistant Professors in the Government degree colleges; (subjectwise details be furnished)

b) whether the Government has intend to fill up the said posts;

c) the criteria being followed to the recruitment of said posts;

d) whether the Government has intend to relax the age limit and provide weightage to the eligible guest lecturers in the said recruitment;

e) the timelimit within which action would be taken to fill up the said posts?

## ENCROACHMENT OF FOREST LAND

**Sri P.R. Ramesh (Nominated) -**

63 (573) Will the Minister for Forest be pleased to state:-

a) the total extent of forest in the State; (districtwise information be furnished)

b) out of which, the extent of forest land that has been encroached; the particulars of measures taken up by the Government to evict the encroachment; (districtwise details be furnished)

c) the number of cases that have been regularised in which persons are residing in the forest area by constructing houses; the number of pending cases? (districtwise complete information be furnished)



## PLAY GROUND FOR SCHOOL CHILDREN

***Sri R. Dharmasena (Local Authorities Constituency) -***

64 (587) Will the Minister for Primary and Secondary Education and Sakala be pleased to state:-

a) whether there are play grounds in all Government and aided/unaided schools of the State; whether the Government is aware of the fact that the play grounds are essential;

b) whether the Government is aware of the fact that play grounds are necessary for the psychological and physical development of the children; if so, the particulars of the measures taken up by the Government?

## AIDED PRIMARY EDUCATIONAL INSITUTIONS

***Sri Ivan D'souza (Nominated) -***

65 (537) Will the Minister for Primary and Secondary Education and Sakala be pleased to state:-

a) the number of aided primary educational institutions in the State; the number of teachers therein; (districtwise details be furnished)

b) the reasons for not providing 'Jyothi Sanjeevini Health' scheme to the aided teachers; (details be furnished)

c) since shoes and socks alongwith text books are being provided to the children of Government schools, the reasons for denying the same to the aided schools; (details be furnished)

d) the measures before the department to compensate the disparity in providing facilities to the teachers and students of the aided schools; (details be furnished)

e) the reasons for denying the Karnataka darshan tour programme to the aided school students which is provided to the Government school students? (details be furnished)

### CHILD LABOUR SYSTEM IN BIDAR DISTRICT

***Sri Vijay Singh (Local Authorities Constituency) -***

66 (530) Will the Minister for Labour and Sugar be pleased to state:-

a) since the number of child labourers are more in Bidar district, the measures taken by the Government to prevent the child labour system;

b) whether it has come to the notice of the Government that child labourers are working in quarry in Bidar district; if so, the actions taken by the Government in this regard?

### PRE-PRIMARY AND PRIMARY EDUCATION IN THE STATE

***Sri Kavatagimath Mahantesh Mallikarjun (Local Authorities Constituency) -***

67 (549) Will the Minister for Primary and Secondary Education and Sakala be pleased to state:-

a) the particulars of local bodies which are providing pre-primary and primary education to the children along with the Education department and department of Women and Child development in the State;

b) the number of pre-primary and primary schools which are being run by the Town Municipal Council, City Municipal Councils and Mahanagara Palike in the State;

c) the number of teachers therein; (genderwise information be furnished)

d) the particulars of syllabus are being followed in the said schools;

e) the particulars of measures for imparting training to the teachers of such schools;

f) the measures taken by the Government for the supervision of said schools? (information be furnished)



### COMPENSATION FOR MENACE OF WILD ANIMALS

***Smt. S. Veena Achaiah (Elected by Legislative Assembly) -***

68 (571) Will the Minister for Forest be pleased to state:-

a) the compensation amount is being provided to the family members of deceased persons and who have lost their cattle due to menace of wild animals in the State; (the complete details of rules/criteria followed and entire process be furnished)

b) since the present compensation amount being provided to the family members of deceased persons and who have lost cattle is very less whether Government would take immediate action to increase the compensation amount considerably;

c) the timelimit within which the compensation amount would be increased?

### ESTABLISHMENT OF I.T. PARK IN BIDAR

***Sri Aravind Kumar Arali (Elected by Legislative Assembly) -***

69 (516) Will the Deputy Chief Minister and Minister for Higher Education, Information Technology and Bio-Technology, Science and Technology, Skill development, Enterpreneurship and Livelihood be pleased to state:-

a) the grant declared in budget during the year 2015-16 for I.T. Park and Incubation centre in Bidar district; whether the Government is aware of the fact that the project has dropped due to technical reasons; if so, whether the Government is intends to commence the said project;

b) if so, the date on which the said project would be commenced; if not, reasons therefor?

### *IMPLEMENTATION OF NEW PENSION SCHEME*

***Sri S.V. Sankanur (Graduates' Constituency) -***

70 (569) Will the Minister for Primary and Secondary Education and Sakala be pleased to state:-

a) whether the Government has contemplated to implement the N.P.S. to the employees who are appointed after 2006 in aided Primary and High schools and Pre-university colleges in the State;

b) if so, whether the information has been collected about the financial burden on the Government? (detailed information be furnished)

### *GOVERNMENT HOSPITALS AND STAFF IN THE STATE*

***Sri H.M. Ramesha Gowda (Elected by Legislative Assembly) -***

71 (540) Will the Minister for Health and Family Welfare and Backward Classes Welfare be pleased to state:-

a) the total number of Government hospitals and staff in the State and the approximate staff;

b) whether basic facilities are available in the Government hospitals in the State; if so, the reasons for taking treatment in the private hospitals by the public; (information be furnished)

c) the disciplinary actions about complaints taken by the Government against the staff who are not available timely in the Government hopitals;

d) whether the Government is aware of the fact that persons have been died due to false vaccination in many hospitals; if so, the particulars of instructions that have been issued by the Government to the staff of hospital for not repeating irresponsible conduct;

e) whether district health officers are fixing one or two days in a week to check-up grievences in the hospitals in the limits of their district; if so, the reasons for negligence of



the public regarding Government hospitals; the impediments before the Government for bringing the schemes of advanced treatment alongwith the basic facilities to the Government hospitals?

### *DEPUTATION OF LECTURERS OF COLLEGIATE EDUCATION DEPARTMENT*

***Sri Basavaraj Shivalingappa Horatti (Teachers' Constituency) -***

72 (558) Will the Deputy Chief Minister and Minister for Higher Education, Information Technology and Bio-Technology, Science and Technology, Skill development, Enterpreneurship and Livelihood be pleased to state:-

a) whether it is true that Assistant/Associate Professors/ non- teaching staff have deputed as per the letter no:Ka Shi Ei 353 yojane 2018-19, dated:19.01.2019 in view of administrative interest; if so, the number of such professors/staff; the reasons therefor;

b) the recruitment date and designation of the same; the place from which they have been transferred to respective places; the particulars of name and designation of the same;

c) whether it has come to the notice of the Government that without teachers the students of the North Karnataka are depriving from education due to such deputation;

d) whether it is not injustice that they are appointed in North Karnataka but deputed to Mysuru and Bengaluru; whether it is possible to mitigate such disparity caused to the students of North Karnatka due by deputing 90 out of 100 to Mysuru and Bengaluru; whether it has come to the notice of the Government that extreme corruption has taken place in this regard?

### ROASTER RELAXATION IN LINGUISTIC MINORITY SCHOOLS

**Sri Arun Shahapur (Teachers' Constituency) -**

73 (533) Will the Minister for Primary and Secondary Education and Sakala be pleased to state:-

a) the rules and regulations prevailing to fill up the vacant teaching posts in Linguistic Minority Aided Schools and Colleges; whether roaster is applicable to the same;

b) the number of vacant posts in linguistic minority schools and colleges at present; (information of Vijayapur/ Bagalakote and Belagavi districts be furnished)

c) whether it has come to the notice of the Government that there is a demand to make relaxation in roaster rules and regulations since it is not possible to fill up the posts of such roaster rules and regulations; if so, the Government has contemplated to provide various relaxations; (details be furnished)

d) the ratio of teacher/students in such primary and high school; whether it has come to the notice of the Government that injustice is being caused to such educational institutions due to such rules and regulations; whether the Government is aware of the fact that there is a discrimination in linguistic religious minority schools; if so, the steps taken by the Government to set right the same?



### ESTABLISHMENT OF GOLLA COMMUNITY DEVELOPMENT CORPORATION

**Smt. Jayamma (Elected by Legislative Assembly) -**

75 (688) Will the Minister for Health and Family Welfare and Backward Classes Welfare be pleased to state:-

a) whether the Government intends to establish the Golla Community Development Corporation;

b) if so, the date on which it would be established;

c) whether the Government intends to declare in the Budget;

d) the population of Golla community in the State? (districtwise details be furnished)

**K.R. MAHALAKSHMI**
Secretary
Karnataka Legislative Council.

Vikasa Soudha, Bengaluru, P7, wd 969, 400 Copies